ದಿನಾಂಕ 13 ನೇ ಮಾರ್ಚ್ 2024 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.

<u>ಮುಂದುವರಿದ ಪಾಟೀ ಸವಾಲು :</u> ಪ್ರತಿವಾದಿ ಪರ ವಕೀಲರಿಂದಃ-

ನಾವು ತಂದೆ ಕಾಲದಿಂದ ವ್ಯವಸಾಯ ಮಾಡುತ್ತಿದ್ದೆವು. ಕೊಗಡಗಿನ ರೈತಾವಳಿ ಬಗ್ಗೆ ನನಗೆ ತಿಳಿದಿದೆ. ಗದ್ದೆ ಜಮೀನಿನಲ್ಲಿ ಭತ್ತ ಬೆಳೆಯುತ್ತಾರೆ ಎಂದರೆ ಸರಿ. ಈಗ 15 ವರ್ಷದಿಂದ ಗದ್ದೆಯಲ್ಲಿ ಕಾಫಿ ಸಹ ಬೆಳೆಯುತ್ತಾರೆ. ಮಳೆ ಆಧಾರಿತ ಬೆಳೆ ಬೆಳೆಯಲು ಭೂಮಿ ಸಮ ಮಟ್ಟ ಆಧರಿಸಿ ಪ್ಲಾಟ್ ಗಳಾಗಿ ವಿಂಗಡಿಸಿರುತ್ತಾರೆ ಎಂದರೆ ಸರಿ. ಒಂದು ಪ್ಲಾಟ್ ನಿಂದ ಮತ್ತೊಂದು ಪ್ಲಾಟ್ ಹೋಗಲು ಇದ್ದು ಅದರ ಅಗಲ 2 ಅಡಿ ಇರುತ್ತದೆ ಎಂದರೆ ಒಂದೊಂದು ಏರಿ 2 ಅಡಿ, 10 ಅಡಿ, 8 ಅಡಿ, ಇರುತ್ತದೆ ಎನ್ನುತ್ತಾರೆ. ನಾನು ಹೇಳಿದಂತೆ ಏರಿ 2 ಅಡಿ, 10 ಅಡಿ, 8 ಅಡಿ ಇರುವುದಿಲ್ಲ ಎಂದರೆ ಸರಿಯಲ್ಲ.

ಸ.ನಂ. 18 ಅನ್ನು ಪ್ರತಿವಾದಿ ಖರೀದಿಸಿದ್ದಾರೆ ಎಂದರೆ ಸರಿಯಲ್ಲ. ಅವರ ಹೆಸರಿನಲ್ಲಿ ಇದೆ ಎನ್ನುತ್ತಾರೆ. ಸ. ನಂ. 18 ಗದ್ದೆ ಇದೆ ಎಂದರೆ ಈಗ 7-8 ವರ್ಷಗಳಿಂದ ತೋಟ ಮಾಡಿರುತಾರೆ ಎನ್ನುತ್ತಾರೆ. ಸ.ನಂ. 18 ರಲ್ಲಿ ಭತ್ತ ಬೆಳೆಯುತ್ತಾರೆ ಎಂದರೆ ಈಗ ತೋಟ ಮಾಡಿದ್ದಾರೆ ಮೊದಲು ಭತ್ತ ಬೆಳೆಯುತ್ತಿದ್ದರು. ನಾನು ಕೇಳಿರುವ ರಸ್ತೆ ಗ್ರಾಮ ನಕ್ಷೆಯಲ್ಲಿ ನಮೂದಾಗಿರಬಹುದು ಅಷ್ಟಾಗಿ ಗೊತ್ತಿಲ್ಲ ಎನ್ನುತಾರೆ. ನನ್ನ ದಾವಾ ಪತ್ರದಲ್ಲಿ ರಸ್ತೆ ಗ್ರಾಮ ನಕ್ಷೆ ಯಲ್ಲಿ ನಮೂದಾಗಿದೆ ಎಂದು ಹೇಳಿದ್ದೇನೆ ಎಂದರೆ ಸರಿ. ಸ.ನಂ. 18 ರಲ್ಲಿ ರಸ್ತೆ ಇದೆ ಎಂದು ಗ್ರಾಮ ನಕ್ಷೆಯಲ್ಲಿ ನಮೂದಾಗಿಲ್ಲ ಎಂದರೆ ನನಗೆ ಅಷ್ಟಾಗಿ ಗೊತ್ತಿಲ್ಲ ಎನ್ನುತಾರೆ. ಸದರಿ ವಿಚಾರ ನನಗೆ ತಿಳಿದಿದ್ದರೂ ಸಹ ನನಗೆ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಸ.ನಂ. 18 ರಲ್ಲಿ 4 ಎಕರೆ 69 ಸೆಂಟ್ ಇದೆ ಎಂದರೆ ಇರಬಹುದು ಎನ್ನುತ್ತಾರೆ. ಸ.ನಂ.18 ರಲ್ಲಿ ಪ್ರತಿವಾದಿ ಸ್ವಾಧೀನದಲ್ಲಿ ಪೂರ್ತಿ ಇಲ್ಲ ಎಂದರೆ ನನಗೆ ಗೊತ್ತಿಲ್ಲ ಎನ್ನುತಾರೆ. ಸದರಿ ವಿಚಾರ ನನಗೆ ತಿಳಿದಿದ್ದರೂ ಸಹ ನನಗೆ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ ತಂದೆ ಸ.ನಂ. 18 ರಲ್ಲಿ ಖರೀದಿಸಿದ ಹಲವಾರು ಪ್ಲಾಟ್ ಗಳು ಇದ್ದವು ಎಂದರೆ ಇದ್ದಿರಬಹುದು ಎನ್ನುತ್ತಾರೆ. ಸದರಿ ಪ್ಲಾಟ್ ಗಳಲ್ಲಿ ಒಂದರಿಂದ ಮತ್ತೊಂದು ಪ್ಲಾಟ್‌ಗೆ ಹೋಗಲು 2 ಅಡಿ ಅಗಲದ ಏರಿ ಇತ್ತು ಎಂದರೆ ಮೊದಲು 10 ರಿಂದ 12 ಅಡಿ ಅಗಲದ ಏರಿ ಇತ್ತು ಎನ್ನುತ್ತಾರೆ. ಸ.ನಂ. 18 ರಲ್ಲಿ ನಮ್ಮ ಕುಟುಂಬದ ಇತರೆ ಸದಸ್ಯರು ಇರುವ ಜಾಗದಲ್ಲಿ ಏರಿ 2 ಅಡಿ ಅಗಲದು ಇದೆ ಎಂದರೆ ಬೇರೆ ಸದಸ್ಯರು ಯಾರು ಸ.ನಂ.18 ರಲ್ಲಿ ಸ್ವಾಧೀನದಲ್ಲಿ ಇಲ್ಲ ಎನ್ನುತ್ತಾರೆ.

ಸ.ನಂ. 18 ರಲ್ಲಿ ಇರುವ ಪ್ಲಾಟ್ ಗಳಲ್ಲಿ 2 ಅಡಿ ಅಗಲವು ಏರಿಗಳು ಇದ್ದವು ಎಂದರೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಸ.ನಂ.18 ರಲ್ಲಿ ಭಾಗಶಹಃ ಮಾತ್ರ ಪ್ರತಿವಾದಿ ಸ್ವಾಧೀನದಲ್ಲಿ ಇದ್ದಾರೆ, ಉಳಿದ ಸ್ವತ್ತಿನಲ್ಲಿ ಇತರೆಯವರು ಸಾಧೀನದಲ್ಲಿದ್ದು, ಅದರಲ್ಲಿರುವ ಏರಿ 2 ಅಡಿ ಅಗಲದು ಈಗಲೂ ಇದೆ ಎಂದರೆ ಸರಿಯಲ್ಲ. ಪ್ರತಿವಾದಿಯರ ಸ್ವತ್ತಿಗೆ ಎಲ್ಲಾ ಕಡೆ ಬೇಲಿ ಹಾಕಿದ್ದಾರೆ ಎಂದರೆ ತೋಡು ಕಡೆ ಮಾತ್ರ ಬೇಲಿ ಹಾಕಿದ್ದಾರೆ ಎನ್ನುತ್ತಾರೆ. ಪ್ರತಿವಾದಿ ಹಾಕಿರುವ ಬೇಲಿ ಆಚೆ ತೋಡಿಗೆ ಹೋಗಲು ಇರುವ ಏರಿಗೆ ಹೋಗಿ ನಮ್ಮ ಜಮೀನಿಗೆ ಹೋಗಬಹುದು ಎಂದರೆ ಆ ರೀತಿ ರಸ್ತೆ, ಸೌಲಭ್ಯ ಇಲ್ಲ ಎನ್ನುತ್ತಾರೆ. ಆ ರೀತಿ ಸೌಲಭ್ಯ ಇದ್ದರೂ ಸಹ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪ್ರತಿವಾದಿ ಸ.ನಂ. 18 ರಲ್ಲಿ ಕಾಫಿ,ಅಡಿಕೆ ಬೆಳೆದಿದ್ದಾರೆ. ಕಾಫಿ ಅಡಿಕೆ ಬೆಳೆಗೆ ಪ್ರಾಣಿಗಳು ಬಂದರೆ ಬೆಳೆಗೆ ನಷ್ಟ ಆಗುತ್ತದೆ ಎನ್ನುತ್ತಾರೆ. ದಾವಾದಲ್ಲಿ ಕೇಳಿರುವ ರಸ್ತೆ 10 ಅಡಿ ರಸ್ತೆ ಇರಲಿಲ್ಲ, 2 ಅಡಿ ಅಗಲದ ಏರಿ ಇತ್ತು ಎಂದರೆ ಸರಿಯಲ್ಲ. ಪ್ರತಿವಾದಿ ಕಾಫಿ ತೋಟ ಮಾಡಿದ ನಂತರ ಅವರ ಅನುಕೂಲಕ್ಕಾಗಿ ಏರಿಯನ್ನು ಅಗಲವಾಗಿ 10 ಅಡಿ ರಸೆತಯನ್ನಾಗಿ ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. 50 ವರ್ಷದಿಂದ 10 ಅಡಿ ಅಗಲದ ಏರಿ ಇತ್ತು ಎನ್ನುತ್ತಾರೆ. 10 ಅಡಿ ಏರಿ 50 ವರ್ಷದಿಂದ ಇತ್ತು ಎಂಬ ಬಗ್ಗೆ ದಾಖಲಾತಿ ನಮ್ಮ ಬಳಿ ಇಲ್ಲ ಎನ್ನುತ್ತಾರೆ. ಪ್ರತಿವಾದಿ ಸ್ವಂತಕ್ಕಾಗಿ ಮಾಡಿಕೊಂಡಿರುವ ರಸ್ತೆಯಲ್ಲಿ ನಾನು Right of way ಕೇಳಲು ಬರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಃ- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಖ್ತಲೇಖನದಂತೆ ಗಣಕಯಂತ್ರದಲ್ಲಿಬೆರಳಚ್ಚು ಮಾಡಿಸಲಾಗಿರುತ್ತದೆ)
ಓದಿ ಹೇಳಿ ಕೇಳಿಸಿ ಸರಿ ಇದೆ ಎಂದು ಒಪ್ಪಿದೆ.

Sdxxx-

(ಸಾಕ್ಷಿಯವರ ಸಹಿ)

ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ.,ಪೊನ್ನಂಪೇಟೆ.